

ಕನ್ನಡ ರಂಗಭೂಮಿ ಮತ್ತು ಸಿನಿಮಾದಲ್ಲಿ **ಭಾರ್ಗವಿ ನಾರಾಯಣ್** (ಫೆ. 4, 1938 – ಫೆ. 14, 2022) ಅವರದ್ದು ಚಿರಪರಿಚಿತ ಹೆಸರು. ಬದುಕು ಹಾಗೂ ಕಲೆ ಎರಡನ್ನೂ ಪ್ರಸನ್ನ ಮನೋಭಾವದಿಂದ ಕಂಡ ಹಿರಿಯ ಕಲಾವಿದೆಯ ವ್ಯಕ್ತಿತ್ವ ಹಾಗೂ ಸಾಧನೆಯನ್ನು ಅವರ ಮಗಳು ಸುಧಾ ಬೆಳವಾಡಿ 'ಸುಧಾ' ಓದುಗರಿಗಾಗಿ ನೆನಪಿಸಿಕೊಂಡಿದ್ದಾರೆ.

■ ನಿರೂಪಣೆ: **ಸುಶೀಲಾ ಡೋಣೂರ**




# ಪ್ರೀತಿ ನದಿಯೇ ಅಮ್ಮನಾಗಿ...

ಅಮ್ಮ ಅಂದ್ರೆ ಅಂಬರ, ಆಕಾಶದಷ್ಟೇ ವಿಶಾಲ. ನನ್ನಮ್ಮ ಅಂದ್ರೆ ಹರಿಯುವ ನದಿ, ಬದುಕು ತಂದೊಡ್ಡುವ ಕಲ್ಮಶಗಳನ್ನೆಲ್ಲಾ ಬದಿಗೆ ಸರಿಸುತ್ತ ನಿಚ್ಚಳವಾಗಿ, ನಿರಂತರವಾಗಿ ಹರಿಯುತ್ತದಲ್ಲ, ಆ ನದಿಗೆ ಸಮ.

ಹೌದು, ಅಮ್ಮ ಬದುಕಿದ್ದೇ ಹೀಗೆ. ಬಹಳ ಸರಳವಾಗಿ ಬದುಕಿದಳು. ನಮ್ಮ ಬದುಕನ್ನೂ ಅಷ್ಟೇ ಸರಳಗೊಳಿಸಿಟ್ಟು ಹೋದಳು. ಬದುಕಿನ ಬಗ್ಗೆ ಬಹಳ ದೊಡ್ಡದೊಡ್ಡ ನಿರೀಕ್ಷೆಗಳೇನೂ ಇರಲಿಲ್ಲ, ಹೀಗಾಗಿ ಗೊಣಗಾಟಗಳೂ ಇರಲಿಲ್ಲ. ತಾನೊಬ್ಬ ದೊಡ್ಡ ಕಲಾವಿದೆ ಎನ್ನುವ ಹಮ್ಮೂ ಇರಲಿಲ್ಲ. ಯಾವತ್ತೂ ಯಾವುದಕ್ಕೂ ಬೆನ್ನಟ್ಟಿ ಓಡಲಿಲ್ಲ. ಬದುಕು ಕೊಡುವ ಚಿಕ್ಕಪುಟ್ಟ ಅವಕಾಶಗಳನ್ನೇ ಪ್ರೀತಿಸುತ್ತ, ಪ್ರೀತಿಯಿಂದ ಮೈದಡುವುತ್ತ ಬಂದಳು.



ಮಗಳು ಸುಧಾ ಕಂಡಂತೆ ಅಮ್ಮ ಭಾರ್ಗವಿ

ಬಹಳ ಸ್ಪಷ್ಟವಾದ ನಿಲುವು, ನಿರ್ಭಿಡೆಯ ನಡೆ–ನುಡಿ. ವಿಚಾರದಷ್ಟೇ ಮಾತುಗಳು ಸಹ ಸೌಮ್ಯ, ಆದರೂ ಸುಸ್ಪಷ್ಟ. ತನ್ನ ಮೇಲೆ ಒತ್ತಡ ಹಾಕಿಕೊಳ್ಳುತ್ತಿರಲಿಲ್ಲ, ನಮ್ಮ ಮೇಲೂ ಒತ್ತಡ ಹಾಕಲಿಲ್ಲ. ಎಲ್ಲ ಅಮ್ಮಂದಿರಿಗೂ ಮಕ್ಕಳ ಶಾಲೆ, ಓದು, ಅಧ್ಯಯನ, ಭವಿಷ್ಯ... ಮುಖ್ಯವಾಗಿ ಮದುವೆಯ ಬಗ್ಗೆ ಬಹಳ ನಿರ್ದಿಷ್ಟವಾದ ಮಾನದಂಡಗಳಿರುತ್ತವೆ. ಅಪಾರ ನಿರೀಕ್ಷೆಗಳಿರುತ್ತವೆ. 'ಹೀಗೇ ಇರು, ಹೀಗೇ ಮಾಡು, ಇದನ್ನೇ ಮಾಡು' ಎಂದೆಲ್ಲಾ ಗೆರೆ ಎಳೆಯುತ್ತಾರೆ. ಆದರೆ, ಅಮ್ಮ ಯಾವತ್ತೂ ನಮ್ಮೊಂದಿಗೆ ಹಾಗೆ ವರ್ತಿಸಲಿಲ್ಲ. 'ಅವಳು ಓದುತ್ತಿಲ್ಲ, ಕ್ಲಾಸಿನಲ್ಲಿ ಮಾತೇ ಆಡುವುದಿಲ್ಲ, ಏನು ಕೇಳಿದರೂ ಉತ್ತರಿಸುವುದಿಲ್ಲ' ಎಂದೆಲ್ಲಾ ನನ್ನ ಬಗ್ಗೆ ಶಾಲೆಯಿಂದ ದೂರುಗಳು ಬಂದಾಗಲೂ ಅಮ್ಮ ಶಾಂತವಾಗಿಯೇ ಉತ್ತರಿಸುತ್ತಿದ್ದಳು: 'ಅವಳ